ಶ್ರೀ ಹಂಜಿ ಶಿವಣ್ಣ—ಭತ್ತವನ್ನು ಸಂಗ್ರಹಣೆ ಮಾಡಿ ಲಾಭಮಾಡಿಉಳಿದಿರತಕ್ಕ ಹಣ ಭತ್ತವನ್ನೂ ಕೊಟ್ಟಿಕೊಳ್ಳದೆ ಇರತಕ್ಕ ಹಣವೆ ? ಸರ್ಕಾರದವರು ರೈತರು ಲೆವಿ ಭತ್ತವನ್ನು ಮೇಲೆ, ರೈತನ ಹತ್ತಿರ ೪೦ಕ್ವಿಂಟಾಲ್‌ಗಳಿಗಿಂತ ಹೆಚಾ ಗೆ ಇದ್ದುದಕ್ಕೂ ಅಧಿಕಾರಿಗಳು ಹೋಗಿ ಕಾದೆಯಿಪ್ರಕಾರ ಲೆವಿ ಕೊಡಲಿಲ್ಲ ಎಂದು ಭತ್ತವನ್ನು ವಸೂಲು ಮಾಡುವುದನ್ನು ತಪ್ಪಿಸಲಿಕ್ಕೆಪ್ರಯತ್ನಪಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ.—ಕೊಡಬೇಕಾದಂಥ ಲೆವಿ ಕೊಟ್ಟಮೇಲೆ ಯಾವ ರೈತರ ಮೇಲೆ ಕಾನೂನು ಖಟ್ಲೆ ವಿಧಿಸುವ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿಲ್ಲ ಆರೀತಿ ಮಾಡಕೂಡದು ಎಂದು ಆದೇಶ ಕೊಟ್ಟಿದ್ದೇವೆ. ಲೆವಿಪ್ರಕ್ಯೂರ್‌ಮೆಂಟ್ ಆರ್ಡರ್ ಪ್ರಕಾರ ಹಣ ಮುಂಗಡವಾಗಿ ಕೊಟ್ಟಿದ್ದೇವೆ. ತಾವು ಹೇಳಿದ ಪ್ರಕಾರ ವಿತರಣೆ ಮಾಡುವ ವಿಷಯದಲ್ಲಿ ನಾವು ಏನು ಹಣವನ್ನು ಕೊಟ್ಟಿದ್ದೇವೋ, ಅದಕ್ಕೆ ಭತ್ತವನ್ನು ವಸೂಲಿ ಮಾಡಿ ನಮ್ಮ ಪರವಾಗಿ ಇಟ್ಟುಕೊಂಡಿದ್ದು ನಾವು ಹೇಳಿದ ಕಾಲದಲ್ಲಿ ವಿತರಣೆ ಮಾಡಬೇಕು. ೧೯೫೮ರಲ್ಲಿ ಒಂದು ಕಾಸೂ ಬಾಕಿ ಇಲ್ಲ, ೧೯೫೯ರಲ್ಲಿ ಬಾಕಿ ಇದೆ. ಜಿಲ್ಲಾವಾರು ರೈಸ್ ಮಿಲ್ಸ್‌ಗಳ ಒಂದು ದೊಡ್ಡ ಪಟ್ಟಿಯೇ ಇದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ್.—ರೈತರಿಂದ ಭತ್ತ ಸಂಗ್ರಹಣೆ ಮಾಡಿ ಅಕ್ಕಿ ಮಾಡಿ ಮಾರಾಂ ಮಾಡುತ್ತಾರೆ. ಸಂಗ್ರಹಣೆ ಮಾಡಬೇಕಾದರೆ ಕೊಡಬೇಕಾದ ಧಾರಣೆಗೂ ಅಕ್ಕಿಯನ್ನು ಮಾರಾಟ ಮಾಡುವಾಗ ಕೊಡುವ ಧಾರಣೆಗೂ ವ್ಯತ್ಯಾಸವಿರುತ್ತದೆ. ಇದರಿಂದ ಬಂದಂಥ ಲಾಭವನ್ನು ಯಾರು ಲೆವಿ ಕೊಡ ಶ್ತಾರೋ ಅವರಿಗೆ ಈ ಹಣವನ್ನು ಕೊಡತಕ್ಕ ಏರ್ಪಾಡು ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೆಗೌಡ.—ಈ ಪ್ರಶ್ನೆಯಲ್ಲಿ, ತಾವು ಕೇಳಿದಂಥ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಕೆ. ಯಂಕಟಪ್ಪ.—ತಾವು ಏನು ಭತ್ತವನ್ನು ಶೇಖರಣೆ ಮಾಡುತ್ತೀರೋ ಅದನ್ನು ಸರ್ಕಾರದವರು ಎಷ್ಟು ದಿವಸದಲ್ಲಿ ಗಿರಣಿಗಳಿಂದ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ ? ತಮ್ಮ ವಶಕ್ಕೆ ತೆಗೆದು ಕೊಂಡ ಮೇಲೆ ಅದನ್ನು ನಿಮ್ಮ ಆಹಾರ ನಿಯಂತ್ರಣ ಕಾಯಿದೆ ಪ್ರಕಾರ ವಿತರಣೆ ಮಾಡುತ್ತೀರಾ ?

(No Answer)

9-30 A.M.

ಶ್ರೀ ಕೆ. ಮಾದೇಗೌಡ.—ಬಾಕಿದಾರರ ಮೇಲೆ ಕೋರ್ಟಿಗೆ ಕೇಸ್ ದಾಖಲು ಮಾಡಿದ್ದೇವೆ ಎಂದು ಹೇಳಿದ್ದೀರಿ. ಕೇಸು ದಾಖಲು ಮಾಡಿದ್ದರೆ ಎಷ್ಟು ಜನದ ಮೇಲೆ ತಾವು ಅಟ್ಯಾಚ್‌ಮೆಂಟ್ ತೆಗೆದು ಕೊಂಡಿದ್ದಾರೆ ಅಥವಾ ಈ ಮಧ್ಯೆ ಅವರ ಆಸ್ತಿಯನ್ನು ಬೇರೆಯವರಿಗೆ ವರ್ಗಾವಣೆ ಮಾಡಿದರೆ ಅವರಿಂದ ಬಾಕಿ ಯಾವ ರೀತಿಯಲ್ಲಿ ತಾವು ವಸಲೂ ಮಾಡುತ್ತೀರಿ ?

ಶ್ರೀ ಎನ್. ಚಿಕ್ಕೇಗೌಡ.—ನಾನು ಈಗಾಗಲೇ ಹೇಳಿದ ಹಾಗೆ ಹೈಕೋರ್ಟು, ಸುಪ್ರೀಂ ಕೋರ್ಟುನಲ್ಲಿ ಕೇಸುಗಳು ಇವೆ. ಇವುಗಳ ಬಗ್ಗೆ ಪ್ರೊಸೀಡಿಂಗ್ಸ್ ಎಲ್ಲಾ ತೆಗೆದುಕೊಂಡು ಅವು ಹಂತ, ಹಂತಗಳಲ್ಲಿ ಇವೆ, ಯಾವುದಾದರೂ ಒಂದು ನಿರ್ದಿಷ್ಟವಾದ ಕೇಸಿನಲ್ಲಿ ಕೇಳಿದರೆ ಹೇಳುತ್ತೇನೆ.

N.R.W.S. SCHEME IN ARSIKERE TALUK

363. SRI H. S. SIDDAPPA (Arsikere).—

Will the Minister for Community Development and Social Welfare be pleased to state :—

(*a*) the names of villages where protected tap water is provided under N.R.W.S. in Arsikere taluk ;

(*b*) the names of villages in Arsikere taluk for which the schemes are under preparation and pending sanction ;

(SRI H. S. SIDDAPPA)

(*c*) the names of villages for which financial assistance is granted by Govnrnment (under L.R. Assignment) for the above scheme and the amount of assistance given :

(*d*) the nemes of villages where this Water Supply Scheme (under N.R.W S.) are disconnected for non-payment of electric power charges and since when ?

SRI M. MALLIKARJUNA SWAMY (Minister for Community Development and Social Welfare).—

(a) (i) J.C. Pura
(ii) Doddamettikurke
(iii) Haranahalli
(iv) Aggunda

(*b*) Statement I appended

		Rs.
(*c*)	(1) J.C. Pura	2,350
	(2) Doddamettikurki	4,000
	(3) Undiganalu	3,225
	(4) Kanakatte	4,650
	(5) Javgal	7,600

(*d*) (i) Haranahalli since 1967.
(ii) Aggunda since 1970.

Stetement I

Names of the villages in Arsikere Taluk for which plans and estimates for providing water supply are ready.

Sl. No.	Name of the village	Estimated cost
1	2	3
		Rs.
1	Marasethahally	38,300
2	Naganahalli	46,800
3	Yadavanahalli	58,400
4	Holalkere	59,600
5	Bagivalu	49,100
6	Undiganalu	64,500
7	Arakere	41,100
8	Karigunda	62,000

1	2			3
				Rs.
9	Gundakanahalli	...	...	24,600
10	Sulekere	...	...	51,000
11	Belavathaballi	..	...	28,900
12	Madalu	...	...	1,10,000
13	Kuduregundi	...	...	57,000
14	Lalanakere	...	...	58,500
15	Gollarahatti	...	...	11,500
			Total	... 7,62,300

ಶ್ರೀ ಎಚ್. ಎಸ್. ಸಿದ್ದಪ್ಪ.—ಹಾರನಹಳ್ಳಿ ಮತ್ತು ಅಗ್ಗುಂದ ಊರುಗಳಿಗೆ ಎನ್.ಆರ್.ಡಬ್ಲೂ.ಎಸ್. ಸ್ಕೀಮಿನಿಂದ ನೀರು ಒದಗಿಸುವ ಯೋಜನೆ ವಿಫಲವಾಗಿದೆ. ಎಲೆಕ್ಟ್ರಿಸಿಟಿ ದುಡ್ಡು ಕೊಡದೆ ನಿಂತು ಹೋಗಿದೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಈ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇನ್ನು ಏನಾದರೂ ಮಾಡಿದ್ದೀರಾ ?

†ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಿಂತು ಹೋಗಿರತಕ್ಕ ಎಲೆಕ್ಟ್ರಿಸಿಟಿ ಚಾರ್ಜಸ್ ಕೊಡದೆ ಇರುವುದು ಮಾನ್ಯ ಸದಸ್ಯರೇ ಹೇಳಿದ್ದಾರೆ, ಉತ್ತರದಲ್ಲಿ ಕೂಡ ಹೇಳಿದ್ದೇವೆ ಅವರಿಗೆ ಕೊಡತಕ್ಕ ೩೦ ಪರ್ಸೆಂಟ್ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಏನು ಇದೆ ಅದರಲ್ಲಿ ಅಡ್‌ಜಸ್ಟ್ ಮಾಡಿ ಎಂದು ಈಗಾಗಲೇ ಸಂಬಂಧಪಟ್ಟಂಥ ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—೧೯೭೨ನೇ ಇಸವಿಯಿಂದ ಹಾರದಹಳ್ಳಿಗೆ ೧೯೭೦ನೇ ಇಸವಿಯಿಂದ ಅಗುಂದಕ್ಕೆ ನೀರಿನ ಸರಬರಾಯಿ ಯೋಜನೆ ನಿಂತು ಹೋಗಿದೆ. ಕುಡಿಯುವ ನೀರಿನ ವ್ಯವಸ್ಥೆ ಏನಂ ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ದುಡ್ಡು ಕೊಟ್ಟಿಲ್ಲ. ಇರತಕ್ಕ ಭಾವಿಗಳಿಂದ ನೀರು ಕುಡಿಯುತ್ತಾ ಇರಬಹುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಇಂಥ ಗ್ರಾಮಪಂಚಾಯಿತಿಗಳಿಗೆ ತಾವು ನೀರು ಸರಬರಾಯಿ ಅಭಿವೃದ್ಧಿಯನ್ನು ಮುಂದುವರಿಸುವುದಕ್ಕೆ ಸಲಹೆ ಕೊಡತಕ್ಕ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಕೈಹಾಕಿದ್ದಾರೆ ಇದು ಸರಿಯೇ ? ಇದರ ಬಗ್ಗೆ ನಿಮ್ಮ ವಿವೇಚನೆ ಏನು ? ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಗೊತ್ತಾಗಿಲ್ಲ, ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ. ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ನೀರಂ ಸರಬರಾಯಿ ಯೋಜನೆಗೆ ಸಂಬಂಧಪಟ್ಟ ಹಾಗೆ ಕೊಡಬೇಕಾದಂಥ ಮೈಂಟೆನೆನ್ಸ್ ಚಾರ್ಜಸ್ ಇದೆ ಅದನ್ನು ಪಂಚಾಯತಿಗಳಿಗೆ ಕೊಡತಕ್ಕ ಕಾಲದಲ್ಲಿ ಅನೇಕ ಪಂಚಾಯತಿಗಳು ವಿಫಲಗೊಂಡಿವೆ. ಅದಕ್ಕೆ ಕೊಡದೆ ಇರತಕ್ಕ ಪಂಚಾಯತಿ ತಾಲ್ಲೂಕು ಬೋರ್ಡುಗಳಿಂದ ರೆವಿನ್ಯೂ ಅಸೆಸ್‌ಮೆಂಟ್ ಏನು ಕಲೆಕ್ಟ್ ಆಗುತ್ತದೆ. ಆದರಲ್ಲಿ ಅಡ್‌ಜಸ್ಟ್ ಮಾಡಿಕೊಂಡ ಮೇಲೆ ಉಳಿದ ರೆವಿನ್ಯೂ ಅಸೆಸ್‌ಮೆಂಟ್ ಬಾಕಿ ಹಣವನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುವುದಕ್ಕೆ ಸೂಕ್ತ ತಿದ್ದುಪಡಿ ತರುವುದು ಉತ್ತಮವಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಆ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಎಂ. ನಂಜೇಗೌಡ.— (ಬಿ) ಉತ್ತರವಾಗಿ ಕೊಟ್ಟಿರತಕ್ಕ ೧೫ ಹಳ್ಳಿಗಳಲ್ಲಿ ಬಹುಭಾಗ ನನ್ನ ಕ್ಷೇತ್ರ ಜಾವಗಲ್ಲಂ ಮತ್ತು ಗಂಡಸಿ ಹೋಬಳಿಗಳು ಸೇರಿವೆ. ಈ ಎರಡು ಹೋಬಳಿಗಳಲ್ಲಿ ೪-೬ ವರ್ಷಗಳಲ್ಲಿ ಮೇಲ್ಪಟ್ಟು ಸರಿಯಾಗಿ ಮಳೆಯಾಗದೆ ಅನೇಕ ಹಳ್ಳಿಗಳು ನೀರಿನ ಬವಣೆಯನ್ನು ಅನುಭವಿಸುತ್ತಾ ಇರುವುದು. ಇಂಥಹ ಪರಿಸ್ಥಿತಿಯಲ್ಲಿ ತಕ್ಷಣ ಅಲ್ಲಿ ನೀರನ್ನು ಒದಗಿಸುವ ಕಾರ್ಯಕ್ರಮ ಸರ್ಕಾರ ಕೈಕೊಳ್ಳುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆಗಲಿ ಕೈಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ-(ಜಿ) the names of villages in Arsikere Taluk for whichthe schemes are under preparation and pending sanction ಎಂಬುದಕ್ಕೆ ಉತ್ತರ ಒಂದು ಪಟ್ಟಿ ಕೊಟ್ಟಿದ್ದೀರಿ. ಸರ್ಕಾರದ ಒಂದು ಹೊಸ ನಿರೂಪಣೆ ಮಾತಂ ಪತ್ರಿಕೆಯಲ್ಲಿ ಓದಿದೆ, ೧೦ ಪರ್ಸೆಂಟ್ ಪಂಚಾಯತಿ ಕಾಂಟ್ರಿಬ್ಯೂಷನ್‌ನ್ನು ಕೊಡಲು ಅಲ್ಲಿನ ಪಂಚಾಯತಿಗಳು ಆಶಕ್ತವಾಗಿವೆ ಮತ್ತು ಬರಗಾಲದ ಪರಿಸ್ಥಿತಿಯಲ್ಲಿ ಇರತಕ್ಕ ಪ್ರದೇಶಗಳಲ್ಲಿ ಇದನ್ನು ಕೂಡ ಸೇರಿಸಿ ಪಂಚಾಯತಿಗಳ ಮೇಲೆ ಹೇರದೆ ಸರ್ಕಾರ ಪೂರ್ತಿ ಹಣವನ್ನು ಈ ಯೋಜನೆಗೆ ವಹಿಸಿಕೊಳ್ಳುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದಾರೆಂದು ಇದೆ. ಅರಸೀಕೆರೆ ತಾಲ್ಲೂಕು ಕೂಡ ಕ್ಯಾನಿಕರ ಅಫ್ ಕ್ಟೆಡ್ ಏರಿಯಾ ಎಂದು ಭಾವಿಸಿ ಈ ಸ್ಕೀಮಿನಲ್ಲಿ ೧೫ ಗ್ರಾಮಗಳಿಗೆ ಏನು ಅಂದಾಜು ಆಗಿದೆ ಅಪ್ಪನ್ನು ಸ್ಯಾಂಕ್ಷನ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದನ್ನು ಸ್ಕೇರ್‌ಸಿಟಿ ಏರಿಯಾ ಎಂದು ಪರಿಗಣಿಸಿಲ್ಲ ಆದುದರಿಂದ ಪಂಚಾಯತಿ ಕೊಡತಕ್ಕ ೧೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಟ್ಟೇ ಕೊಡಬೇಕು.

DAM ACROSS MAVINA RIVER IN SAGAR TALUK

433. Sri Kagodu Thimmappa (Sagar) —

Will the Minister of State for Major Irrigation be pleased to state :—

(*a*) whether survey has been conducted for construction of a dam across Mavina river near Bilisiri village of Sagar taluk ;

(*b*) the estimated extent of land that would be irrigated under this dam (Talukwise information may be furnished) ;

(*c*) when the Government proposes to implement this Scheme ?

Sri H. M. Channabasappa (Minister for Public Works and Electricity) On behalf of.

Sri H. N. Nanje Gowda (Minister of State for Major Irrigation).—

(*a*), (*b*) and (*c*) The scheme is yet under consideration and depending upon the Award of Krishna River Water Dispute Tribunal.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ನನ್ನ ಪ್ರಶ್ನೆ (ಅ) ವಿಭಾಗದಲ್ಲಿ ಹೋಳಿ ಆಣೆಕಟ್ಟು ಸರ್ವೆ ಮುಕ್ತಾಯವಾಗಿದೆಯೇ ಅದಕ್ಕೆ ಉತ್ತರದಲ್ಲಿ ಏನೂ ಹೇಳಲಿಲ್ಲ ಒಂದೇ ಉತ್ತರದಲ್ಲಿ ಎಲ್ಲಾ ಸೇರಿಸಿದ್ದೀರಿ. ಆಣೆಕಟ್ಟು ಕಟ್ಟುವ ಬಗ್ಗೆ ಏನಾದರೂ ಸರ್ವೆಮಾಡಿದ್ದೀರಾ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ವೆ ಮಾಡಿದ್ದಪಕ್ಷದಲ್ಲಿ ಇದರಿಂದ ನೀರಾವರಿಗೆ ಬರತಕ್ಕ ಪ್ರದೇಶ ಎಷ್ಟು ಮತ್ತು ಮುಳುಗಡೆಯಾಗುವ ಪ್ರದೇಶ ಎಷ್ಟು ?

ಶ್ರೀ ಎಚ್. ಎಂ. ಚೆನ್ನಬಸಪ್ಪ,—೩೫೦೦ ಎಕರೆ ಆಗಬಹುದು ಎಂದು ಅಂದಾಜಾಗಿದೆ. ಮುಳುಗಡೆ ಎಷ್ಟಾಗುತ್ತದೆ ಎನ್ನುವ ವಿವರ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ತಾವು ಉತ್ತರದಲ್ಲಿ ಕೃಷ್ಣ ರಿನ ವಿವಾದಗಳು ಪಂಚಾಯತಿ ತೀರ್ಪನ್ನು ಅವಲಂಬನೆ ಮಾಡಿದೆ ಎಂದು ಹೇಳಿದೀರಿ. ಕೃಷ್ಣ ವಾಟರ್ ಡಿಸ್‌ಪ್ಯೂಟ್ ಪಂಚಾಯತಿ